ದಿನಾಂಕಃ **08/09/2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.
ಪಾಟೀ ಸವಾಲುಃ ಎದುರುದಾರರ ಪರವಾಗಿ ಶ್ರೀ ಎಂ.ಸಿ.ಜೆ ವಕೀಲರಿಂದಃ

1. ದಾವಾ ಸ್ವತ್ತಿನ ಸರ್ವೆ ನಂ.18/9, ವಿಸ್ತೀರ್ಣ 2 ಎಕರೆ 2 ಗುಂಟೆ ಇರುತ್ತದೆ. ಅರಕಲಗೂಡಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸರ್ವೆ ನಂ.18/9 ಕ್ಕೆ ಸಂಬಂದಿಸಿದಂತೆ ಅಸಲು ದಾವಾ ನಂ.247/2024 ರ ದಾವೆಯನ್ನು ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಆ ದಾವೆಯನ್ನು ಬೇರೆ ಸ್ವತ್ತಿಗೆ ಸಂಬಂಧಿಸಿದಂತೆ ಅಂದರೆ ಸರ್ವೆ ನಂ.18/8 ಕ್ಕೆ ಸಂಬಂಧಿಸಿದಂತೆ ದಾವೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಅರಕಲಗೂಡಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸರ್ವೆ ನಂ.18/9 ಕ್ಕೆ ದಾವೆ ದಾಖಲಿಸಿರುವುದಿಲ್ಲ. ಸರ್ವೆ ನಂ.18/9 ಕ್ಕೆ ಸಂಬಂಧಿಸಿದಂತೆ ಅರಕಲಗೂಡಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ಪರಿಹಾರ ನನಗೆ ಬೇಕಾಗಿಲ್ಲ.

2. ಸರ್ವೆ ನಂ.18/9 ರ ಸ್ವತ್ತು ನನ್ನ ಅಜ್ಜಿ ಪುಟ್ಟತಾಯಮ್ಮ ರವರಿಗೆ ಅವರ ತಂಗಿ ಶಿವನಮ್ಮ ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜಿ ಪುಟ್ಟತಾಯಮ್ಮ 1956-97 ರಲ್ಲಿ 1 ಎಕರೆ 30 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಆ ರೀತಿ ನನ್ನ ಅಜ್ಜಿ ಪುಟ್ಟತಾಯಮ್ಮ ಖರೀದಿಸಿರುವ ಸಂಬಂಧ ತೋರಿಸಲು ಕ್ರಯ ಪತ್ರ ಹಾಗೂ M.R.No.859/1956-57 ರ ಮುಟೇಷನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಶಿವನಮ್ಮರವರಿಗೆ ಸಂಬಂಧಪಟ್ಟವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ನಾನು ಶಿವನಮ್ಮರವರ ವಾರಸುದಾರನಲ್ಲ ಆದರೆ ಪುಟ್ಟತಾಯಮ್ಮ ರವರ ವಾರಸುದಾರ ಎಂದು ನುಡಿಯುತ್ತಾರೆ. ಅಕ್ರಮವಾಗಿ ದಾವಾ ಸ್ವತ್ತನ್ನು ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

3. ನಾನು S.S.L.C ವರೆಗೆ ವಿದ್ಯಾಭ್ಯಾಸ ಮಾಡಿದ್ದು ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಾನು ಹಾಜರುಪಡಿಸಿರುವ ನಿಪಿ-30 ರ ಋಣಭಾರ ಪ್ರಮಾಣ ಪತ್ರದಲ್ಲಿ 1956-57

ರ ಖರೀದಿ ಪತ್ರದ ಬಗ್ಗೆ ನಮೂದು ಇದೆಯಾ ಎಂಬ ಪ್ರಶ್ನೆಗೆ ಆ ದಾಖಲಾತಿಯಲ್ಲಿ ನಮೂದು ಇಲ್ಲ ಎಂದು ನುಡಿಯುತ್ತಾರೆ. ಸರ್ವೇ ನಂ.18/9 ರ ಸ್ವತ್ತು ನನಗೆ ಸೇರದೇ ಇದ್ದರೂ ಸಹ ಸುಳ್ಳು ದಾವೆ ಮಾಡಿದ್ದು ಆ ಕಾರಣದಿಂದ ಈ ಹಿಂದೆ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದಾವೆಯು ವಜಾ ಆಗಿತ್ತು ಎಂದರೆ ಸರಿಯಲ್ಲ. ನಾನು ಈ ಮೇಲ್ಮನವಿಯಲ್ಲಿ ಹಾಜರುಪಡಿಸಿರುವ ದಾಖಲಾತಿಗಳು ಸುಳ್ಳು ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಎದುರುದಾರರ  ವಿರುದ್ಧ ಈ ಸುಳ್ಳು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು